# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ–3497/2017

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 16.3.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಪಾವಗಡ ತಾಲ್ಲೂಕು ದೊಮ್ಮತಮರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ.141, ಮುರಾರಾಯನಹಳ್ಳಿ ಗ್ರಾಮದ ಜನತಾ ಕಾಲೋನಿ ಮೂಲಕ ಸರ್ವೆ ನಂ.142/3 ಜಮೀನಿಗೆ ಓಡಾಡುವ ದಾರಿಯ ಒತ್ತುವರಿಯನ್ನು **ತೆರವುಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ** ಬಗ್ಗೆ.

*******

ಶ್ರೀ. ಡಿ.ರಂಗಸ್ವಾಮಿ, ಮುರರಾಯನಹಳ್ಳಿ ಗ್ರಾಮದ ನಿವಾಸಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ “ದೂರುದಾರರು” ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ “ಎದುರುದಾರರು” ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ, ಪಾವಗಡ ತಾಲ್ಲೂಕು ದೊಮ್ಮತಮರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ.141, ಮುರಾರಾಯನಹಳ್ಳಿ ಗ್ರಾಮದ ಜನತಾ ಕಾಲೋನಿ ಮೂಲಕ ಸರ್ವೆ ನಂ.142/3 ಜಮೀನಿಗೆ ಓಡಾಡುವ ದಾರಿಯನ್ನು ಅದೇ ಗ್ರಾಮದ ಅಂಬನಾಯಕ್ ಬಿನ್ ಮಲ್ಯ ನಾಯಕ್ ಮತ್ತು ರಾಮಚಂದ್ರ ನಾಯಕ್ ಬಿನ್ ರಾಮಾ ನಾಯಕ್ ಎಂಬುವವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತಿಯಲ್ಲಿ ಖಾತೆ ಮಾಡಿಸಿಕೊಂಡು ದೂರುದಾರರು ಓಡಾಡುವ ದಾರಿಯನ್ನು ಒತ್ತುವರಿಮಾಡಿಕೊಂಡಿರುತ್ತಾರೆ. ಈ ಬಗ್ಗೆ ಎದುರುದಾರರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಖಾತೆ

ನಂ.163 ಮತ್ತು 168 ವಜಾ ಮಾಡಿ ಒತ್ತುವರಿಯನ್ನು ತೆರವುಗೊಳಿಸಿಕೊಡುವಂತೆ ಕೋರಿದ್ದರೂ ಸಹ ಎದುರುದಾರರು ಸಮಂಜಸವಾಗಿ ವಿಚಾರಣೆ ಮಾಡದೆ ಸದರಿ ಪ್ರಕರಣವನ್ನು ವಜಾ ಮಾಡಿರುತ್ತಾರೆ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿ.10.6.2016ರಂದು ಎದುರುದಾರರು ಮಾಡಿರುವ ಆದೇಶವು ಕಾನೂನುಬಾಹಿರವೆಂದು ವಜಾಮಾಡಿ ಸದರಿ ಪ್ರಕರಣದಲ್ಲಿ ಮರು ವಿಚಾರಣೆ ನಡೆಸಿ, ಮೆರಿಟ್ಸ್ ಆಧಾರದ ಮೇಲೆ 6 ತಿಂಗಳೊಳಗೆ ಇತ್ಯರ್ಥಪಡಿಸಬೇಕೆಂದು ಆದೇಶಿಸಿದೆ. ಸದರಿ ಆದೇಶದ ಪ್ರತಿ ಎದುರುದಾರರಿಗೆ ದಿ.4.4.2016ರಂದು ತಲುಪಿರುತ್ತದೆ. ಆದರೂ ಎದುರುದಾರರು ಇಲ್ಲಿಯವರೆಗೆ ಯಾವುದೇ ಸೂಕ್ತ ಕ್ರಮ ಕೈಗೊಳ್ಳದೇ ದುರುದ್ದೇಶದಿಂದ ದೂರುದಾರರಿಗೆ ತೊಂದರೆ ಕೊಡುತ್ತಿದ್ದಾರೆ. ಕಳೆದ 4 ವರ್ಷಗಳಿಂದ ದೂರುದಾರರಿಗೆ ತಮ್ಮ ಜಮೀನುಗಳಲ್ಲಿ ಯಾವುದೇ ಕೃಷಿ ಚಟುವಟಿಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ.

3. ಎದುರುದಾರರು ದಿ.6.2.2018ರಂದು ತಮ್ಮ ವರದಿಯನ್ನು ಸಲ್ಲಿಸಿ ದಿ.25.1.2018ರಂದು ತಾವು ವಿವಾದಿತ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ತನಿಖೆ ಮಾಡಿ ಮಹಜರು ಮಾಡಿದ್ದು, ತಮ್ಮ ಮುಂದೆ ದಾಖಲಾದ ದೂರಿನಲ್ಲಿ ಆದೇಶ ಮಾಡಿರುವುದಾಗಿ ತಿಳಿಸಿ ಆದೇಶದ ಪ್ರತಿ ಹಾಜರುಪಡಿಸಿರುತ್ತಾರೆ. ಸದರಿ ಆದೇಶದಲ್ಲಿ ಪ್ರತಿವಾದಿಗಳಾದ ಅಂಬಾ ನಾಯಕ್, ರಾಮಚಂದ್ರ ನಾಯಕ್, ಇವರು ಸದರಿ ಸ್ಥಳದಲ್ಲಿ ವಸತಿ ನಿರ್ಮಿಸಿಕೊಂಡು ಉಪಯೋಗಿಸಿರುವ ನಿವೇಶನದ ಕುರಿತಾಗಿ ಯಾವುದೇ ಮೂಲ ದಾಖಲೆಗಳನ್ನು ಒದಗಿಸಲು ವಿಫಲರಾಗಿರುತ್ತಾರೆ. ಸರ್ಕಾರದಿಂದ ನೀಡಲಾಗಿರುವ ಮೂಲ ಹಕ್ಕುಪತ್ರ ಕಳೆದುಹೋಗಿದೆಯೆಂದು ಹೇಳುತ್ತಿದ್ದು ಸದರಿ ನಿವೇಶನ ತಮಗೆ ಸೇರಿದ್ದೆಂದು ದೃಢಪಡಿಸುವ ಯಾವುದೇ ಮೂಲ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ತಕರಾರಿರುವ ನಿವೇಶನದಲ್ಲಿ ಈಗಾಗಲೇ ಮೇಲ್ಕಂಡವರು ಹಾಕಿರುವ ತಳಪಾಯವನ್ನು ತೆರವುಗೊಳಿಸಲು ಮತ್ತು ಅವರ ಹೆಸರಿನಲ್ಲಿದ್ದ ಅಕ್ರಮ ಖಾತೆಗಳನ್ನು ರದ್ದುಪಡಿಸಲು ದೊಮ್ಮತಮರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಆದೇಶ ನೀಡಿರುವುದಾಗಿ ತಿಳಿಸಿರುತ್ತಾರೆ.

4. ದೂರುದಾರರ ಮೊ.ಸಂ.98806 43992 ಗೆ ಕರೆ ಮಾಡಿ ವಿಚಾರಿಸಲಾಗಿ, ಎದುರುದಾರರು ತಮ್ಮ ದೂರಿಗೆ ಸಂಬಂಧಿಸಿದಂತೆ ದೊಮ್ಮತಮರಿ ಪಿ.ಡಿ.ಒ. ಅವರಿಗೆ ಆದೇಶ ಮಾಡಿರುತ್ತಾರೆ. ಆದರೆ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ಎದುರುದಾರರು ಸಹ ತಮ್ಮ ವರದಿಯಲ್ಲಿ ಒತ್ತುವರಿಯನ್ನು ತೆರವುಮಾಡಲು ಸಂಬಂಧಪಟ್ಟ ಪಿ.ಡಿ.ಒ.ಅವರಿಗೆ ಆದೇಶಿಸಲಾಗಿದೆಯೆಂದು ತಿಳಿಸಿರುತ್ತಾರೆ. ಎದುರುದಾರರು ಒತ್ತುವರಿಯನ್ನು ತೆರವುಮಾಡಿದ ಬಗ್ಗೆ ಸ್ಪಷ್ಟವಾದ ವರದಿಯನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ದಿ.9.1.2018ರಂದು ಪತ್ರ ಬರೆದು ತಾನು ಕಾರ್ಯನಿರ್ವಾಹಕ ಅಧಿಕಾರಿಯಾಗಿ 6.1.2018ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ಪ್ರಸ್ತುತ ಹುದ್ದೆಗೆ ಹೊಸಬನಾಗಿರುವುದಾಗಿ ತಿಳಿಸಿದ್ದು, ಈ ದೂರು ದಿ.6.12.2017ರಂದು ಈ ದೂರು ದಾಖಲಾಗಿದ್ದರಿಂದ ಎದುರುದಾರರಾದ ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿಗಳು ಯಾವುದೇ ಕರ್ತವ್ಯಲೋಪ ಕಂಡುಬರುವುದಿಲ್ಲ.

6. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಪಾವಗಡ ತಾಲ್ಲೂಕು ದೊಮ್ಮತಮರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ.141, ಮುರಾರಾಯನಹಳ್ಳಿ ಗ್ರಾಮದ ಜನತಾ ಕಾಲೋನಿ ಮೂಲಕ ಸರ್ವೆ ನಂ.142/3 ಜಮೀನಿಗೆ ಓಡಾಡುವ ದಾರಿಯ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

N. Anand 16/3

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

16/3